ಹೋಗುತ್ತಿದ್ದ ನೀಲಾಳನ್ನು ನೋಡುತ್ತಿದ್ದ ಆಳುಗಳು 'ಪಾಪ, ಅಮ್ಮಾವರಿಗೆ ಈ ಗತಿ ಬರಬಾರದಾಗಿತ್ತು. ನೆನ್ನೆ ಮೊನ್ನೆ ಲಗ್ನ ಆಗಿ ಬಂದಂಗೈತೆ, ಹಸೆಮಣೆ ಮೇಲೆ ಕೂರಿಸ ಬಹುದು ಅಂಗಿದಾರೆ. ಮೋಹನಯ್ನೋರು ತಪ್ಪು ಮಾಡಿಬಿಟ್ರು. ಇಂಥ ಚಂದದ ಹೆಣ್ಣು. ಗೊಂಬೆ ಮಗಳನ್ನು ಬಿಟ್ಬೊಗೋಕೆ ಅದೆಂಗೆ ಮನ್ಸು ಮಾಡಿದ್ರೋ' ಒಬ್ಬರಿಗೊಬ್ಬರು ಮಾತಾಡಿಕೊಂಡರು.

ಭೈರಪ್ಪ 'ನೋಡ್ರಪ್ಪ ಈ ತೋಟದ ಕೆಲ್ಸ ಏನೇನು ಆಗಬೇಕೊ ಅದನ್ನು ನಾವೇ ಮುಂದೆ ನಿಂತು ಮಾಡೋಣ. ಅಮ್ಮಾವ್ರಿಗೂ ಏನೂ ಗೊತ್ತಾಗಲ್ಲ. ಆ ಮಗೀಗೂ ಏನೂ ಗೊತ್ತಾಗೊಲ್ಲ. ನಮ್ಮ ತೋಟ ಇದು ಅಂತ ಕೆಲ್ಸ ಮಾಡೋಣ. ಕೂಲಿ ಎಷ್ಟು ಕೊಡ್ತಾರೋ ಕೊಡ್ಲಿ. ಕೊಡಾಕೆ ಆಗದೆ ಇದ್ರೆ ಬಿಡ್ಲಿ. ನಾವು ದಿನಾ ಇಲ್ಲಿ ಅರ್ಧ ದಿನ ಕೆಲಸ ಮಾಡಿ, ಇನ್ನರ್ಧ ದಿನ ಬೇರೆ ಕಡೆ ಮಾಡೋಣ. ಈ ವರ್ಷ ಸ್ವಲ್ಪ ಅವರಿಗೆ ಸಹಾಯ ಮಾಡೋಣ' ಅಂತ ಹೇಳಿದಾಗ ಇತರರೂ ಅದಕ್ಕೆ ಒಪ್ಪಿಕೊಂಡರು.

ಅವರಿಗೆಲ್ಲಾ ಗೊತ್ತಿತ್ತು. ಹಣಕಾಸಿನ ಸಮಸ್ಯೆಯಿಂದಾಗಿಯೇ ಮೋಹನ ಆತ್ಮಹತ್ಯೆ ಮಾಡಿಕೊಂಡಿದ್ದು, ಈಗ ಮನೆ ಪರಿಸ್ಥಿತಿ ಸ್ವಲ್ಪವೂ ಸರಿ ಇಲ್ಲ ಅಂತ ಗೊತ್ತಾಗಿಯೇ ಅವರೆಲ್ಲ ಭೈರಪ್ಪ ಹೇಳಿದ್ದಕ್ಕೆ ಒಪ್ಪಿಕೊಂಡಿದ್ದು. ಮೋಹನ ಬದುಕಿರುವಾಗ ಆಳುಗಳನ್ನು ಆಳುಗಳಂತೆ ಕಾಣುತ್ತಿರಲೇ ಇಲ್ಲ. ಅವರೊಂದಿಗೆ ತಾನೂ ಕೆಲಸಕ್ಕೆ ಇಳಿದುಬಿಡುತ್ತಿದ್ದ. ಹಾಸ್ಯ ಪ್ರವೃತ್ತಿಯವನಾದ ಮೋಹನ ಸದಾ ಏನಾದರೂ ಹೇಳುತ್ತ, ನಗಿಸುತ್ತ ಆಳುಗಳೊಂದಿಗೆ ಬೆರೆತು ಹೋಗಿ ಅವರ್‍ಯಾರಿಗೂ ಮೋಹನ ತೋಟದ ಯಜಮಾನ ಅಂತ ಅನ್ನಿಸುತ್ತಿರಲೇ ಇಲ್ಲ. ಕಷ್ಟಸುಖ ಅಂದರೆ ಮನೆಯವನಂತೆ ಸ್ಪಂದಿಸುತ್ತಿದ್ದ. ಹಣಕಾಸಿನ ವಿಚಾರದಲ್ಲಿ ಧಾರಾಳವಾಗಿ ನೆರವಾಗುತ್ತಿದ್ದ. ಮದುವೆ, ಮುಂಜಿ. ಸಾವು–ನೋವುಗಳಲ್ಲಿ ಮನೆಯವನಂತೆ ನಿಂತು ಕೆಲಸ ನಿರ್ವಹಿಸುತ್ತಿದ್ದ. ಈ ಸರಳ ನಡೆನುಡಿಯೇ ಎಲ್ಲರಲ್ಲೂ ಮೋಹನ್ ಬಗ್ಗೆ ಅಭಿಮಾನ ಮೂಡಿಸಿ ತಮ್ಮವರಲ್ಲಿ ಒಬ್ಬ ಎಂದೇ ಭಾವಿಸಿಕೊಂಡಿದ್ದರು. ಮೋಹನ ಸತ್ತಾಗ ಸ್ವಂತ ಅಣ್ಣನನ್ನೊ , ತಮ್ಮನನ್ನೊ ಕಳೆದುಕೊಂಡಷ್ಟು ದುಃಖ ಅವರಿಗೂ ಆಗಿತ್ತು. ಈ ರೀತಿ ತಮ್ಮ ಕಷ್ಟಸುಖಗಳಲ್ಲಿ ನೆರವಾಗುವವರು ತಮ್ಮನ್ನು ತಬ್ಬಲಿ ಮಾಡಿಬಿಟ್ರಲ್ಲ ಅಂತ ಒಬ್ಬರನ್ನೊಬ್ಬರು ತಬ್ಬಿ ಅತ್ತು ಗೋಳಾಡಿದ್ದರು. ಹಾಗೆಂದೇ ಈಗ ಮೋಹನನ ತೋಟದಲ್ಲಿ ಕೂಲಿ ಇಲ್ಲದೆ ಕೆಲಸ ಮಾಡಲು ಸಿದ್ಧರಾದರು.

ಕಾಫಿ ಮಾಡ್ಕೊಂಡು ಫ್ಲಾಸ್ಕಿನಲ್ಲಿ ಹಾಕಿಕೊಂಡು ಇವರು ಕೆಲಸ ಮಾಡುತ್ತಿದ್ದ ಜಾಗಕ್ಕೆ ಬಂದ ಅಂಬುಜಮ್ಮ 'ಬನ್ರಪ್ಪ ಕಾಫಿ ಕುಡೀರಿ' ಅಂತ ಕರೆದರು. ಮೋಹನ ಇದ್ದಾಗ ಇದೇ ಸಮಯಕ್ಕೆ ನೀಲಾ ಹೀಗೇ ಕಾಫಿ ತರುತ್ತಿದ್ದದ್ದು, ತಾನೊಬ್ಬನೇ ಕುಡಿಯದೆ ಎಲ್ಲರಿಗೂ ಕೊಟ್ಟು ಕುಡಿಯುತ್ತಿದ್ದದ್ದು ನೆನಪಾಗಿ ದುಃಖದಿಂದ ಭಾರವಾದರು. 'ನೀವ್ಯಾಕೆ ತರೋಕೆ ಹೋದ್ರಿ ಅಮ್ಮಾವ್ರೆ, ಯಾವ ತೋಟದಲ್ಲೂ ಹೀಗೆ ಆಳುಗಳಿಗೆ ಕಾಫಿ ಕೊಡಲ್ಲ. ನಾಳೆಯಿಂದ ಇದ್ನೆಲ್ಲ ಹಚ್ಕೊಬೇಡಿ. ಮೋಹ್ನಪ್ಪನೋರು ಇದ್ದಾಗ ಅವರಿಗಾಗಿ ನೀಲಮ್ಮೋರೇ ತರೋರು. ಈಗ ನಮಗೋಸ್ಕರ ತರಬೇಡಿ ಅಮ್ಮೋರೇ. ಈ ವಯಸ್ಸಿನಲ್ಲಿ ನೀವು ಹೀಗೆ ತರಬೇಕಾ?' ಭೈರಪ್ಪ ಸಂಕೋಚದಿಂದ ನುಡಿದ. ಅಯ್ಯೋ ಬಿಡ್ರಪ್ಪ. ಇದೆಲ್ಲ ಕಷ್ಟಾನಾ. ನಂಗೂ ಅಷ್ಟೆ ಮಾಡಾಗಿತ್ತು. ಸುಮ್ನೆ ಕೂತ್ಕೊಂಡು ಏನು ಮಾಡ್ಲಿ, ತೋಟಾನಾದ್ರೂ ನೋಡೋಣ ಅಂತಾ ಬಂದೆ. ಕಾಫಿ ಪುಡಿ ಕೊಳ್ಳೊಹಾಗಿಲ್ಲ, ಹಾಲು ಕೊಳ್ಳೊಹಾಗಿಲ್ಲ ಮೊದಲಿಂದ್ಲೂ ಕಾಫಿ ಕೊಟ್ಟು ಅಭ್ಯಾಸ ಇಲ್ವಿ. ಮೋಹನ ಇಲ್ಲಾ ಅಂತ ಯಾಕಪ್ಪ ತಪ್ಪಿಸಬೇಕು. ಮೇಲೆ ನೋಡ್ತಾ ಇರ್‍ತಾನೆ. ನೀವು ಕುಡೀರಿ. ನೀವು ಕುಡಿದು ತೃಪ್ತಿಪಟ್ಟರೆ ಅವನ ಆತ್ಮ ಸಂತೋಷ ಪಡುತ್ತೆ' ಹೇಳುತ್ತ ಫ್ಲಾಸ್ಕಿನಿಂದ ಕಾಫಿ ಬಗ್ಗಿಸಿ ಕೊಡುತ್ತ ಅಲ್ಲೇ ಕುಳಿತರು.

'ಅಜ್ಜಮ್ಮ, ನೀವು ಇರೋದ್ರಿಂದ ನೀಲಮ್ಮೋರಿಗೆ ಎಷ್ಟೋ ಆಸರೆ ಆಗೈತೆ. ನೀವೂ ಇಲ್ಲದೆ ಇದ್ದಿದ್ರೆ ಅವರ ಗತಿ ಏನಾಗಬೇಕಿತ್ತು. ಸಣ್ಣ ಮಗ ಅದು. ಅದನ್ನ ಕಟ್ಕೊಂಡು ನೀಲಮ್ಮ ಹೇಗೆ ಇರ್‍ತ ಇದ್ರೊ ಏನೋ. ನೀವೊಂದು ಬಲ ಇದ್ದಂಗೆ' ಶೇಖರ ಹೇಳಿದ.

'ನಾನು ತಾನೇ ಬೇರೆಯವಳಾ. ನಂಗೂ ಮಗನ ಜೊತೆ, ಸೊಸೆ ಜೊತೆ ಏಗಿ ಏಗಿ ಸಾಕಾಗಿತ್ತು. ನೀಲಾಳಿಗೆ ಒಂದು ಆಸರೆ, ನಂಗೂ ಒಂದು ಆಸರೆ. ಜೀವನ ಅಂದ್ರೆ ಇದೆ ಅಲ್ವಾ ಒಬ್ಬರಿಗೊಬ್ಬರು ಆಗೋದು. ಇಲ್ಲಿ ನಂಗೆ ಯಾವ ಕೊರತೆ ಇದೆ. ನಂದೇ ಕೈ... ನಂದೇ ಬಾಯಿ... ಯಜಮಾನಿಕೆ ಪಟ್ಟ ಸಿಕ್ಕಿಬಿಟ್ಟಿದೆ. ಈ ರೀತಿ ಆಗ ಬೇಕಾಗಿತ್ತಾ...' ಮತ್ತೆ ಮೋಹನನ ಸಾವಿನತ್ತ ಹೊರಳಿದರು.

'ಮೋನಪ್ಪರಿಗೆ ಅದೃಷ್ಟ ಇಲ್ಲಾ ಬಿಡ್ರಮ್ಮ' ಅವರ ಆಯಸ್ಸೇ ಅಷ್ಟಿತ್ತು ಅಂತ ಕಾಣುತ್ತೆ. ಹೋದೋರು ಹೋದ್ರು ಈಗ ಇರೋರು ಬದುಕಬೇಕಲ್ಲ. ಹೆಂಗೂ ನೀಲಮ್ಮನೋರ ಚೆನ್ನಾಗಿ ನೋಡಿಕೊಳ್ಳಿ. ಇಲ್ಲದೆ ಇದ್ರೆ ಇಳಾಮ್ಮೋರೋ ತಬ್ಬಲಿ ಆಗಿಬಿಡ್ತಾರೆ. ನೀವೇ ಅವರಿಗೆ ದಿಕ್ಕಾಗಬೇಕು ಈಗ'– ಸಮಾಧಾನಿಸಿದರು ಎಲ್ಲರೂ.

ಹೀಗೆ ಎಲ್ಲರೊಂದಿಗೆ ಮಾತನಾಡುತ್ತಲೇ ಅಂಬುಜಮ್ಮ ಸಮಯ ಕಳೆದರು. ಅವರು ಕೆಲಸ ಮುಗಿಸಿ ಹೊರಟು ನಿಂತರು. ನಾಳೆ ಬರುವುದಾಗಿ ಹೇಳಿದಾಗ 'ಬೇಗ ಬಂದು ನಿಮ್ಮ ತೋಟ ಅಂತ ಕೆಲ್ಸ ಮಾಡ್ರಪ್ಪ, ನಮ್ಮ ನೀಲಂಗು ಏನೂ ಗೊತ್ತಾಗಲ್ಲ. ಅವರ ಭಾವ ಪ್ರತಿದಿನ ಇಲ್ಲಿಗೆ ಬರೋಕೆ ಆಗುತ್ತ. ನೀವೇ ಈ ತೋಟಾನ ಉಳಿಸಬೇಕು. ನೀವು ಮನಸು ಮಾಡಿ ದುಡಿದ್ರೆ ಸಾಲ ತೀರಿಸಿ ಅವರು ಈ ಆಸ್ತೀನಾ




ಉಳಿಸಿಕೊಳ್ಳಬಹುದು' ಅಂತ ನಿವೇದಿಸಿಕೊಂಡರು.

'ನೀವು ಹೇಳಬೇಕಾ ಅಮ್ಮೋರೇ. ಮೋಹನಪ್ಪ ನಮಗೆಲ್ಲ ಅಣ್ಣನಂಗೆ ಇದ್ರು, ಈಗ ಅವರಿಲ್ಲ ಅಂತ ಕೈ ಬಿಟ್ಟುಬಿಡ್ತೀವಾ? ಹೆದರಬೇಡಿ ಇದು ನಮ್ಮ ತೋಟ. ಇದನ್ನ ಚಿನ್ನ... ಚಿನ್ನ ಇಟ್ಕಂಡಂಗೆ ಇಟ್ಕೊತೀವಿ. ನೀವೇನು ಚಿಂತೆ ಮಾಡಬೇಡಿ. ಈ ಸಲ ಪಸಲು ಚೆನ್ನಾಗಿ ಬರೋಹಂಗೆ ಕೆಲ್ಸ ಮಾಡ್ತೀವಿ' ಎಲ್ಲರೂ ಅಂಬುಜಮ್ಮನಿಗೆ ಧೈರ್ಯ ತುಂಬಿದರು. ಮೋಹನನ ಒಳ್ಳೆಯತನ ಅವನ ಹೆಂಡ್ತೀನಾ ಮಗಳನ್ನ ಕಾಪಾಡುತ್ತೆ ಅಂತ ಅಂದುಕೊಳ್ಳುತ್ತ ಪಾಪ ಈ ಜನ ಎಲ್ಲಾ ಒಳ್ಳೆಯವರು. ಮೋಹನನ ಮೇಲೆ ಅವರಿಗೆಲ್ಲ ಎಷ್ಟೊಂದು ಅಭಿಮಾನ. ಹೇಗೋ ಕಾಲ ತಳ್ಳಿದರೆ ಆಯ್ತು. ಆ ಮಗೂದು ಒಂದು ಮದ್ವೆ ಆಗಿ ಒಳ್ಳೆಮನೆ ಸೇರೋ ತನಕ ಈ ಆಸ್ತೀನೆಲ್ಲ ಜೋಪಾನ ಮಾಡಬೇಕು. ಆಮೇಲೆ ನೀಲಂದು ಹೇಗೋ ಆಗುತ್ತೆ ಅಂದುಕೊಳ್ಳುತ್ತಲೇ ಫ್ಲಾಸ್ಕ್ ಹಿಡಿದುಕೊಂಡು ಮನೆಗೆ ನಡೆದರು. ನೀಲಸೊಂದಿಗೆ ಆಳುಗಳು ಆಡಿದ ಮಾತೆಲ್ಲವನ್ನ ಹೇಳಿಕೊಂಡು ಸಂತೋಷಿಸಿದರು. ಇಷ್ಟೆಲ್ಲ ಇರುವಾಗ ನಂಗೆ ಏನು ಆತಂಕ ಇಲ್ಲಾ ಕಣೆ ನೀಲಾ. ತೋಟದ ಕೆಲ್ಸದ ಜವಾಬ್ದಾರಿನೆಲ್ಲ ಅವರೆ ಹೊತ್ತುಕೊಂಡಿದ್ದಾರೆ. ಮೋಹನನ ಕಂಡ್ರೆ ಅವರಿಗೆಲ್ಲ ತುಂಬಾ ಪ್ರೀತಿ ಕಣೆ. ಅಂತಾ ದಿನವೆಲ್ಲ ಹೇಳ್ತಾನೇ ಇದ್ರು. ನೀಲಾ ಮಾತ್ರ ಮೌನ ಮುರಿಯಲೇ ಇಲ್ಲ.

ಊಟ ಮಾಡಿ ಮಲಗಿದ್ದ ನೀಲಾ ನಿದ್ರೆ ಬಾರದೆ ಹೊರಳಾಡಿ, ದೊಡ್ಡಮ್ಮ ಕೆಲ್ಸ ಹೇಗೆ ಮಾಡಿದ್ದಾರೋ ನೋಡಿಕೊಂಡು ಬರ್‍ತೀನಿ. ತೋಟಕ್ಕೆ ಹೋಗ್ತೀನಿ ನೀನು ಮಲಗಿರು' ಎಂದು ನೀಲಾ ಎದ್ದು ಹೊರಟಾಗ 'ನಂಗೂ ನಿದ್ದೆ ಬರ್‍ತಾ ಇಲ್ಲಾ ಕಣೆ, ಒಬ್ಳೆ ತೋಟಕ್ಕೆ ಹೋಗಬೇಡ, ಇರು ನಾನೂ ಬರ್‍ತೀನಿ' ಅಂತಾ ಅಂಬುಜಮ್ಮನೂ ಹೊರಟು ನಿಂತರು. ಗಿಡಗಳ ಕೆಳಗಿದ್ದ ಒಣ ಎಲೆಗಳನ್ನೆಲ್ಲ ತೆಗೆದು ಸ್ವಚ್ಛ ಗೊಳಿಸಿದ್ದರು. ಈಗ ತೋಟ ಕಳೆ ಕಳೆಯಾಗಿ ಸ್ವಚ್ಛವಾಗಿ ಕಾಣುತ್ತಿತ್ತು. 'ಪರವಾಗಿಲ್ಲ ಮನೆಯವರೊಬ್ಬರೂ ಜೊತೆಯಲ್ಲಿ ಇಲ್ಲದೆ ಇದ್ದರೂ ನೀಟಾಗಿ ಕೆಲಸ ಮುಗಿಸಿದ್ದಾರೆ ದೊಡ್ಡಮ್ಮ, ನಾಳೆ ಇಳಾ ಬರ್‍ತಾಳಲ್ವ'– ನೀಲಾ ಕೇಳಿದಳು.

'ಹ್ಞೂ ಕಣೆ. ನಾಳೇನೆ ಬರ್‍ತೀನಿ ಅಂದ್ಲು. ಈಗ ಕಾಲೇಜು ಇಲ್ಲ... ಪರೀಕ್ಷೆನೂ ಇಲ್ಲ... ಅಲ್ಲೇನು ಮಾಡ್ತಾಳೆ ಇದ್ದುಕೊಂಡು....

'ಅಲ್ಲಾ ದೊಡ್ಡಮ್ಮ, ನನ್ನ ಒಂದು ಮಾತು ಕೇಳಬೇಕು ಅಂತ ಅವಳಿಗೆ ಅನ್ನಿಸಲಿಲ್ಲವಾ?'

'ಹಾಗಲ್ಲ ಕಣೆ, ಬೆಳಿಗ್ಗೇನೆ ನಾನು ನಿಂಗೆ ಹೇಳಲಿಲ್ಲವಾ. ನೀನು ಮಲಗಿದ್ದೆ. ಯಾಕೆ ಸುಮ್ನೆ ಎಬ್ಬಿಸೋದು ಅಂತ ಅಂದುಕೊಂಡಿದ್ದಾಳೆ.'

'ಇಲ್ಲಾ ದೊಡ್ಡಮ್ಮ, ಮೋಹನ ಸತ್ತಾಗಲಿಂದ ಅವಳು ನನ್ನ ಜೊತೆ ಮಾತಾಡ್ತ ಇಲ್ಲ. ನನ್ನ ನೋಡ್ತ ಇಲ್ಲ. ಮುಂಚಿನಂತೆ ಅಮ್ಮ ಅಂತ ನನ್ನ ಹತ್ರ ಬರ್‍ತ ಇಲ್ಲಾ. ನಾನೂ ನನ್ನದೇ ಲೋಕದಲ್ಲಿ ಇದ್ದುಬಿಟ್ಟೆ. ನನ್ನದೆ ದುಃಖದಲ್ಲಿ ಅವಳನ್ನು ಗಮನಿಸಲೇ ಇಲ್ಲ. ಅವಳಿಗಾಗಿರೋ ದುಃಖ ನಂಗೂ ಆಗಿದೆ. ನಾವಿಬ್ಬರೂ ಸಮಾನ ದುಃಖಿಗಳು. ಆದ್ರೆ ನಾನೂ ಅವಳ ಬಗ್ಗೆ ಆಲೋಚಿಸಲಿಲ್ಲ. ಅವಳಾದ್ರೂ ನನ್ನ ಬಗ್ಗೆ ಆಲೋಚಿಸಬೇಕಿತ್ತು ಅಲ್ವಾ ದೊಡ್ಡಮ್ಮ' ದೀರ್ಘವಾಗಿ ನುಡಿದಳು.

'ನೀನು ಏನೇನೋ ಅಂದ್ಕೊಂಡು ಮತ್ತೆ ಮತ್ತೆ ಮನಸ್ಸು ಕೆಡಿಸಿಕೊಳ್ಳಬೇಡ. ಅವಳು ಮುಂದೇನು ಅನ್ನೋ ಚಿಂತೆಯಲ್ಲಿ ಬೇರೆ ಕಡೆ ಗಮನ ಕೊಡ್ತಾ ಇಲ್ಲಾ. ಅದನ್ನೆ ದೊಡ್ಡದು ಮಾಡಬೇಡ' ಅಂತ ಗದರಿಸಿದರು ಅಂಬುಜಮ್ಮ. (ಸಶೇಷ)